ಆದ್ದರಿಂದ ಪ್ರತಿಯೊಂದು ಕೇಂದ್ರಕ್ಕೆ ಪ್ರತಿ ತಿಂಗಳು ವೈದ್ಯರು ಭೇಟಿ ಕೊಡತಕ್ಕ ವ್ಯವಸ್ಥೆ ಮಾಡಬೇಕು. ಮೂರನೆಯದಾಗಿ ಅಂಗನವಾಡಿ ಕಾರ್ಯಕರ್ತರಿಗೆ ಸಂಬಳ ಹೆಚ್ಚಿಸುವ ಬಗ್ಗೆ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬೇಕೇ ಹೊರತು ರಾಜ್ಯ ಸರ್ಕಾರಕ್ಕೆ ಸಂಬಂಧವಿಲ್ಲ ಎಂದು ಹೇಳಿದ್ದಾರೆ. ಆದರೆ ನಾನು ಕೇಳ ಬಯಸುತ್ತೇನೆ ಈ ರಾಜ್ಯ ಸರ್ಕಾರದವರಿಗೆ ಜವಾಬ್ದಾರಿ ಏನೂ ಇಲ್ಲವೆ? ಮಾನ್ಯ ಮಂತ್ರಿಗಳು ಇದರ ಬಗ್ಗೆ ಉತ್ತರ ಕೊಡಬೇಕು.

ಶ್ರೀ ವಿ. ಎಲ್. ಪಾಟೀಲ್.—ಸಾಧ್ಯವಾದಷ್ಟು ಕಡೆ ಕಟ್ಟಡಗಳನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಂ. ಶಿವಣ್ಣ.—ಎಷ್ಟಾಗಿದೆ ಎಂದು ಕೇಳಿದ್ದೇನೆ?

ಶ್ರೀ ವಿ. ಎಲ್. ಪಾಟೀಲ್.—ಕಟ್ಟಡಗಳನ್ನು ಕಟ್ಟಬೇಕೆಂಬ ವಿಷಯ ಯೋಚನೆಯಲ್ಲಿದೆ. ಎರಡನೆಯದಾಗಿ ಮಕ್ಕಳಿಗೆ ಔಷಧ ಕೊಡುವ ವಿಷಯ ಅವರು ಹೇಳಿದ್ದಾರೆ. ಮೂರು ತಿಂಗಳಿಗೊಮ್ಮೆ ಪ್ರತಿ ಕೇಂದ್ರಕ್ಕೆ ವೈದ್ಯರು ಭೇಟಿ ಕೊಡುತ್ತಿದ್ದಾರೆ. ನಮ್ಮ ಇಲಾಖೆಯವರು ಹಾಗೂ ಆರೋಗ್ಯ ಇಲಾಖೆಯವರು ಮೇಲಿಂದ ಮೇಲೆ ಇದನ್ನು ರೆವ್ಯೂ ಮಾಡುತ್ತಾರೆ. ಎಲ್ಲಿ ಅವಶ್ಯವಿದೆ ಅಲ್ಲಿ ಹೆಚ್ಚು ಸಾರಿ ವೈದ್ಯರು ಭೇಟಿ ಕೊಡುತ್ತಾರೆ. ಅಂಗನವಾಡಿ ಕಾರ್ಯಕರ್ತರ ವಿಷಯದಲ್ಲಿ ಈ ಸರ್ಕಾರಕ್ಕೆ ಜವಾಬ್ದಾರಿ ಇಲ್ಲವೇ ಎಂದು ಕೇಳಿದ್ದಾರೆ. ಅವರಿಗೆ ಹೆಚ್ಚು ಸೌಲಭ್ಯ ಕೊಡಬೇಕೆಂದು ಕೇಳಿದಾಗ ಎಸ್.ಎಸ್.ಎಲ್.ಸಿ. ಪೂರ್ವ ಮತ್ತು ನಂತರದವರಿಗೆ ೫೫ ರೂಪಾಯಿ ಮತ್ತು ೨೦೦ ರೂಪಾಯಿಗಳನ್ನು ಏನು ಕೊಡುತ್ತಿದ್ದರು ಅದನ್ನು ೧೬೫ ಮತ್ತು ೨೦೦ ರೂಪಾಯಿಗೆ ಹೆಚ್ಚಿಸಿದ್ದಾರೆ. ರಾಜ್ಯ ಸರ್ಕಾರಕ್ಕೆ ಜವಾಬ್ದಾರಿ ಇಲ್ಲವೇ ಎಂದು ಕೇಳಿದ್ದಾರೆ. ನಮ್ಮ ರಾಜ್ಯದ ವತಿಯಿಂದ ಮೂರನೆತ್ತು ಕೇಂದ್ರಗಳನ್ನು ನಾವು ನಡೆಸುತ್ತಿದ್ದೇವೆ. ಬಹುಶಃ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಯಾವ ರಾಜ್ಯದವರು ನಡೆಸುತ್ತಿಲ್ಲ ಎಂದು ನಾನು ಅಭಿಮಾನದಿಂದ ಹೇಳುತ್ತಿದ್ದೇನೆ.

ಶ್ರೀ ಕೆ.ಹೆಚ್. ಪಾಟೀಲ್.—ಅಂಗನವಾಡಿ ಸ್ಕೀಂ ಪ್ರಕಾರ ಪೂರ್ಣ ಹಣ ಕೇಂದ್ರ ಸರ್ಕಾರದಲ್ಲವೆ?

ಅಧ್ಯಕ್ಷರು.—ಟೈಂ ಆಗುತ್ತಿದೆ. ಈಗಾಗಲೇ ಅರ್ಧ ಗಂಟೆ ಆಯಿತು. ಇನ್ನೂ ಹತ್ತು ಪ್ರಶ್ನೆಗಳಿವೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಿ. ಎಲ್. ಪಾಟೀಲ್.—ಹೌದು, ಕೇಂದ್ರ ಸರ್ಕಾರದವರು ಕೊಡುತ್ತಾರೆ.

ರಾಜ್ಯದಲ್ಲಿ ಪ್ರವಾಹ ತಡೆ ಹಾಗೂ ನೀರಾವರಿ ಯೋಜನೆಗಳು

*೫೫೫. ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ) —ಮಾನ್ಯ ಲೋಕೋಪಯೋಗಿ ಕಾಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಅನ್ವೇಷಣೆ ಮಾಡಿ ಸಾಧ್ಯವೆಂದು ರುಜುವಾತಾದ ಪ್ರವಾಹ ನಿವಾರಣೆ ಹಾಗೂ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು?

ಆ) ಅವುಗಳ ಹೆಸರು ಮತ್ತು ಅಂದಾಜು ಮತ್ತು ನೀರಾವರಿ ಸಂಭಾವ್ಯ ವಿವರಗಳು.

ಇ) ಪ್ರವಾಹ ನಿವಾರಣೆ ಹಾಗೂ ನೀರಾವರಿ ಯೋಜನೆಗಳಿಗೆ ವಿಶೇಷ ಕೇಂದ್ರ ಕೊಡುಗೆ ಮತ್ತು ಧನ ಸಹಾಯವೇನಾದರೂ ಮೀಸಲಿಟ್ಟಿದ್ದಾರೆಯೇ?

ಈ) ರಾಜ್ಯದಲ್ಲಿ ಕಾರ್ಯಗತವಾಗುತ್ತಿರುವ ಇಂತಹ ಯೋಜನೆಗಳ ಸಂಖ್ಯೆ ಎಷ್ಟು?

ಉ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಇಂತಹ ಯೋಜನೆಗಳಿಗೋಸ್ಕರ ಉಪಯೋಗ ಪಡೆದ ಕೇಂದ್ರ ಕೊಡುಗೆಯ ಹಣವೆಷ್ಟು?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಯಾವುವೂ ಇಲ್ಲ.

ಆ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಇ) ಯಾವುವೂ ಇಲ್ಲ.

ಈ) ಯಾವುವೂ ಇಲ್ಲ.

ಉ) ಯಾವುವೂ ಇಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಉತ್ತರ ಬಹಳ ವಿಚಿತ್ರವಾಗಿದೆ. ಇದೊಂದೇ ಅಲ್ಲ. ಇನ್ನೂ ಕೆಲವಕ್ಕೆ, ತುಂಗಾ ಲಿಫ್ಟ್ ಇರಿಗೇಷನ್ ಬಗ್ಗೆ ಕೇಳಿದಾಗ ಇಲ್ಲವೇ ಇಲ್ಲ ಎಂದು ಉತ್ತರ ಕೊಟ್ಟರು. ನೀವು ಮಂತ್ರಿಗಳಾದಮೇಲೆ ಎಲ್ಲಾ ರೈಟ್ ಆಫ್ ಮಾಡಿ ಹೊಸದಾಗಿ ಡಿಪಾರ್ಟ್‌ಮೆಂಟ್ ಶುರು ಮಾಡಿದ್ದಾರೇನೋ ಎಂದು ಆಶ್ಚರ್ಯವಾಗುತ್ತಿದೆ. ಮುಖ್ಯವಾದ ಪ್ರಶ್ನೆಯನ್ನು ನಾನು ಕೇಳಿದ್ದೇನೆ. ಈ ರಾಜ್ಯದಲ್ಲಿ ಪ್ರವಾಹ ನಿಯಂತ್ರಣ ಮತ್ತು ನೀರಾವರಿಗೆ ಕೂಡಿದಂತೆ ಇರತಕ್ಕ ಯೋಜನೆಗಳ ಸಮೀಕ್ಷೆಯಾಗಿದೆಯೇ ? ಅಂಥಾದ್ದು ಎಷ್ಟು ಇದೆ ಎಂದು ಕೇಳಿದ್ದೇನೆ ಅದಕ್ಕೆ ಯಾವುದೂ ಇಲ್ಲ ಎಂದು ಉತ್ತರ ಹೇಳಿದ್ದೀರಿ. ನನಗೆ ಗೊತ್ತಿರುವಂತೆ ವರದಿ ನದಿಯ ಮೇಲೆ ೧೪ ಇಂಥ ಯೋಜನೆಗಳು ಇನ್‌ವೆಸ್ಟಿಗೇಷನ್ ಆಗಿ ಅವು ಮಾಡಲಿಕ್ಕೆ ಯೋಗ್ಯವಾಗಿವೆ ಎಂದು ಆಗಿ ಅಲ್ಲೆಲ್ಲಾ ಸೈಟುಗಳ ಹತ್ತಿರ ದಾರಿ ಮಾಡಿ ಬೋರ್ಡ್‌ಗಳನ್ನೂ ಹಾಕಿದ್ದಾರೆ, ಹಳೇ ಬೋರ್ಡ್‌ಗಳು ಇನ್ನೂ ಉಳಿದಿರಬೇಕು. ಬಂದರೆ ನಾನು ತೋರಿಸುವುದಕ್ಕೆ ತಯಾರಿದ್ದೇನೆ. ಪ್ರವಾಹ ನಿಯಂತ್ರಣ ಮತ್ತು ವಂಧ್ಯವು ನೀರಾವರಿ ಯೋಜನೆಗಳು ಅವು. ಕೇಂದ್ರಸರ್ಕಾರದಲ್ಲಿ ಈ ರೀತಿಯ ಪ್ರವಾಹ ನಿಯಂತ್ರಣ ಮತ್ತು ನೀರಾವರಿಗೆ ಸೇರಿದಂಥ ಯೋಜನೆಗಳಿಗೆ ವಿಶೇಷವಾದ ಅನುದಾನಕ್ಕೆ ಅವಕಾಶವಿದೆ ಎಂಬುದು ನನ್ನ ಭಾವನೆ. ಅದು ನಿಜವಾಗಿದ್ದರೆ ನಮ್ಮ ರಾಜ್ಯ ಸರ್ಕಾರ ಆ ದಿಸೆಯಲ್ಲಿ ಯಾವ ಪ್ರಯತ್ನವನ್ನೂ ನಡೆಸಿಲ್ಲ ಎಂಬುದರ ಕಡೆಗೆ ಗಮನ ಸೆಳೆಯುವುದಕ್ಕೆ ಈ ಪ್ರಶ್ನೆಯನ್ನು ಹಾಕಿದ್ದೇನೆ. ಆದರೆ ಇದರ ಬುಡವನ್ನೇ ಅವರು ಹಾರಿದ್ದಾರೆ. ವರದ ಯೋಜನೆ ಇನ್‌ವೆಸ್ಟಿಗೇಷನ್ ಏನು ಆಗಿತ್ತು ಅದುಮುಖ್ಯಮಂತ್ರಿಗಳಿಗೂ ಗೊತ್ತಿರಬಹುದು. ಏಕೆಂದರೆ ಆ ನದಿಯಪರಿಚಯ ಅವರಿಗೆ ಜಾಸ್ತಿ ಇದೆ, ಅಂಥ ೧೪ ಯೋಜನೆಗಳು ಸಿದ್ಧವಾಗಿದ್ದರೂ ಯಾವುದೂ ಇಲ್ಲ ಎಂದೂ, ಪ್ರಶ್ನೆ ಉದ್ಭವಿಸುವುದಿಲ್ಲ ಎಂದೂ ಉತ್ತರ ಕೊಟ್ಟಿರುವುದು ವಿಚಿತ್ರವಾಗಿದೆ ದಯವಿಟ್ಟು ಇದನ್ನು ಮತ್ತೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.— ಸ್ವಾಮಿ, ಅವರು ಏನು ಪ್ರಶ್ನೆ ಕೇಳಿದ್ದಾರೆ ಎಂಬ ಅರಿವು ಇದೆ. ಆದರಲ್ಲೂ ಶ್ರೀನಿವಾಸ್ ಅವರು ಕೇಳಿದಾಗ ತುಂಬಾ ಎಚ್ಚರ ವಹಿಸಿ ನೋಡುತ್ತೇನೆ. ವರದ ನದಿಯ ಪಾತ್ರದಲ್ಲಿ ಬರತಕ್ಕ ಕೆಲವು ಸಣ್ಣ ನೀರಾವರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳನ್ನು ಕಾಂಪೊಸಿಟ್ ಪ್ರಾಜೆಕ್ಟ್ ಆಗಿ ಪರಿಗಣಿಸಿ ಕೇಂದ್ರಸರ್ಕಾರದಿಂದ ಹಣ ಪಡೆದುಕೊಳ್ಳಬಹುದು ಎಂಬುದು ಅವರ ಭಾವನೆ. ಅದರ ಬಗ್ಗೆ ಹಿಂದೆ ಯೋಜನೆ ಮಾಡಿದ್ದಾರೆ. ಆ ಯೋಜನೆಗಳನ್ನು ಓದಿಬಿಡುತ್ತೇನೆ. ಹಿಂದಿನ ಸರ್ಕಾರ ಮಾಡಿದ ಯೋಜನೆಯನ್ನು ತೆಗೆದಂಹಾಕುವ ಪ್ರಶ್ನೆ ಇಲ್ಲ. ಅರಳಿಹೊಂಡ ಪ್ರಾಜೆಕ್ಟ್, ಸುಂಟರಹಳ್ಳಿ ರಿಸರ್ವಾಯರ್ ಪ್ರಾಜೆಕ್ಟ್, ದುಂಡವತೆ ರಿಸರ್ವಾಯರ್ ಪ್ರಾಜೆಕ್ಟ್, ಮಾವಿನ ಹೊಳೆ ರಿಸರ್ವಾಯರ್ ಪ್ರಾಜೆಕ್ಟ್ ಎಂದು ಮಾಡಿದ್ದರು. ತದನಂತರ ಆಗಿರತಕ್ಕ ಬೆಳವಣಿಗೆ ಬಗ್ಗೆ ಹೇಳುವುದಾದರೆ—

> "Subsequently during December '77, the then Chief Engineer vide his inspection note from 11-2-77 to 13-2-77 has directed as under:
>
> Varada Valley Project has failed as Flood Control cum irrigation project. This would be misleading nomenclature because it is not possible to design these schems for flood control. They are purely irrigation projects. Accordingly the above projects are being investigated and design as purely irrigation projects. the following are the details of Varada Sub Basin."

ಆಯಿತಾ ಸ್ವಾಮಿ ? ೧೯೭೭ರಲ್ಲಿ ತಾಂತ್ರಿಕ ಮುಖ್ಯಾಧಿಕಾರಿ ತೆಗೆದುಕೊಂಡ ನಿರ್ಣಯ ಇದು. ನಾನು ನಿನ್ನೆ ಬಂದು ಬದಲಾವಣೆ ಮಾಡಿಲ್ಲ. ಪ್ರಾಜೆಕ್ಟ್ ವಿವರಣೆಯನ್ನು ಬೇಕು ಎಂದರೆ ಹೇಳುತ್ತೇನೆ. ಆರಳೆಹೊಂಡ ಪ್ರಾಜೆಕ್ಟ್‌ಗೆ ೫೦೬ ಲಕ್ಷ ರೂಪಾಯಿಗಳ ಎಸ್ಟಿಮೇಟ್ ಆಗಿದೆ. ೪೭೩೭ ಎಕರೆ ನೀರಾವರಿ ಯಾಗುತ್ತದೆ. ೭೩೪ ಟಿ.ಎಂ.ಸಿ. ಕೃಷ್ಣ ಅವಾರ್ಡ್‌ನಲ್ಲಿ ಏನಿದೆಯೋ ಅದರಲ್ಲಿ ೧.೪೬೨ ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಬೇಕೆಂದು ಇಯರ್‌ಮಾರ್ಕ್ ಮಾಡಿದ್ದಾರೆ. ಅದೇ ರೀತಿ ಸುಂಟರಹಳ್ಳಿ ರಿಸರ್ವಾಯರ್ ಪ್ರಾಜೆಕ್ಟ್‌ಗೆ ೪೫೩ ಲಕ್ಷ ರೂಪಾಯಿಗಳ ಅಂದಾಜು ಇದೆ. ೭೫೯ ಟಿ.ಎಂ.ಸಿ.ಅಡಿ ನೀರಿನಲ್ಲಿ ೦.೮೨ ಟಿ.ಎಂ.ಸಿ. ಅಡಿ ನೀರನ್ನು ಉಪಯೋಗ ಮಾಡಬಹುದೆಂದು ನಿಗದಿ ಮಾಡಲಾಗಿದೆ. ದುಡವತಿ ರಿಸರ್ವಾಯರ್ ಪ್ರಾಜೆಕ್ಟ್‌ಗೆ ೨೮ ಕೋಟಿ ೫ ಲಕ್ಷ ರೂಪಾಯಿಗಳ ಅಂದಾಜು ಇದ್ದು ೭೫೪ ಟಿ.ಎಂ.ಸಿ. ಇದ್ದು ೭೫೪ ಟಿ.ಎಂ.ಸಿ. ಅಡಿ ಪೈಕಿ ೨.೬ ಟಿ.ಎಂ.ಸಿ. ಅಡಿ ನೀರನ್ನು ಉಪಯೋಗ ಮಾಡಬಹುದಾಗಿದೆ. ಇದು ಇರತಕ್ಕ ವಾಸ್ತವಾಂಶ. ಹಾಗೆಯೇ ಮಾವಿನ ಹೊಳೆ ಪ್ರಾಜೆಕ್ಟ್‌ನ್ನು ಮಾಡಬೇಕೆಂದು ಹೇಳಿಲ್ಲ. ಇದರ ಅಂದಾಜು ವೆಚ್ಚ ೯೨೦ ಲಕ್ಷ ರೂಪಾಯಿಗಳಾಗಿದ್ದು ೧.೦೮೯ ಟಿ.ಎಂ.ಸಿ ಅಡಿ ನೀರು ಇದಕ್ಕೆ ಬೇಕಾಗುತ್ತದೆ. ಹಾಗೂ ೬,೮೦೦ ಎಕರೆ ನೀರಾವರಿ ಆಗುತ್ತದೆ ಎಂದೂ ತಜ್ಞರ ಅಭಿಪ್ರಾಯ ಇದೆ.

ಶ್ರೀ ಕೆ. ಎಚ್. ಶ್ರೀನಿವಾಸ್.— ಅಧ್ಯಕ್ಷರೇ ನಾನು ಈಗ ಇನ್ನೊಂದು ಉಪ ಪ್ರಶ್ನೆಯನ್ನು ಕೇಳುತ್ತೇನೆ.

ಅಧ್ಯಕ್ಷರು.— ಈಗ ಸಪ್ಲಿಮೆಂಟರಿ ಬೇಡ. ಮಂದಿನ ಪ್ರಶ್ನೆಗೆ ಹೋಗೋಣ.

ಶ್ರೀ ಕೆ. ಎಚ್. ಶ್ರೀನಿವಾಸ್.— ಇದು ಬಹಳ ಮುಖ್ಯ ಇದೆ.

ಅಧ್ಯಕ್ಷರು.— ಇದು ಬಹಳ ಮುಖ್ಯ ಇದೆ ಎಂದು ನನಗೂ ಗೊತ್ತು. ಕಾಲ ಕಡಿಮೆ ಇದೆ. ಈ ಬಗ್ಗೆ ಚರ್ಚೆ ಮಾಡಬೇಕೆಂದಿದ್ದರೆ ಅರ್ಧಗಂಟೆ ಚರ್ಚೆಗೆ ನೋಟೀಸ್ ಕೊಡಿ. ತಾವು ದಯವಿಟ್ಟು ಈಗ ಕುಳಿತುಕೊಳ್ಳಿ.

ಪಿರಿಯಾಪಟ್ಟಣ ತಾಲ್ಲೂಕು ಇಂಗಲ ಕೆರೆ ನಿರ್ಮಾಣದ ಕಾಮಗಾರಿ ಕುರಿತು

೬೩೨. ಶ್ರೀ ಕೆ ವೆಂಕಟೇಶ್ (ಪಿರಿಯಾ ಪಟ್ಟಣ).—ಮಾನ್ಯ ಲೋಕೋಪಯೋಗಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಪಿರಿಯಾಪಟ್ಟಣ ತಾಲ್ಲೂಕು ಇಂಗಲ ಕೆರೆ ನಿರ್ಮಾಣದ ಕೆಲಸ ಯಾವ ಹಂತದಲ್ಲಿದೆ ?

(ಆ) ಇದಕ್ಕೆ ವೆಚ್ಚ ಮಾಡಿರುವ ಹಣವೆಷ್ಟು ? ಹಾಗೂ ಈ ಕೆರೆಯಂ ನಿರ್ಮಾಣದಿಂದ ನೀರಾವರಿಗೆ ಒಳಪಡುವ ಭೂಮಿ ಎಷ್ಟು ?

ಶ್ರೀ ಹೆಚ್. ಡಿ ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಏರಿ, ತೂಬು ಮತ್ತು ಕೋಡಿ ಕೆಲಸಗಳನ್ನು ಕೈಗೊಳ್ಳಲಾಗಿದೆ. ಬಲದಂಡೆ ನಾಲೆ, ಎಡದಂಡೆ ನಾಲೆ ಮತ್ತು ಹಳ್ಳದ ಭಾಗದ ಏರಿಯಾ ಕೆಲಸಗಳನ್ನು ಇನ್ನೂ ಕೈಗೊಳ್ಳಬೇಕಾಗಿದೆ.

(ಆ) ೧೭.೦೬ ಲಕ್ಷ ರೂಪಾಯಿಗಳು. ೩೬೯ ಹೆಕ್ಟೇರುಗಳಷ್ಟು.

ಬಂದಿರತಕ್ಕ ಸಮಸ್ಯೆ ಏನೆಂದರೆ, ಈ ಕೆರೆಗೆ ಅರಣ್ಯದ ಜಾಗವನ್ನು ಬಿಟ್ಟುಕೊಡುವ ಬಗ್ಗೆ ಜಿಜ್ಞಾಸೆ ಆಗಿದೆ. ಕೇಂದ್ರ ಸರ್ಕಾರ ಏನು ಕಾಯ್ದೆಯನ್ನು ತಂದಿದೆಯೋ ಅದಕ್ಕೆ ಪೂರ್ವದಲ್ಲೇ ತೆಗೆದುಕೊಂಡಿರತಕ್ಕ ಕಾರ್ಯ ಇದು. ಇತ್ತೀಚೆಗೆ ಕೇಂದ್ರ ಸರ್ಕಾರ ರೂಪಿಸಿರತಕ್ಕ ಕಾಯಿದೆ ಇದಕ್ಕೆ ಅನ್ವಯವಾಗ ಬಾರದು ಎಂದು ನಾವು ನಿಲುವು ತೆಗೆದುಕೊಂಡಿದ್ದೇವೆ. ಹಾಗೂ ಇದಕ್ಕೆ ಈಗಾಗಲೇ ೧೭ ಲಕ್ಷ ರೂಪಾಯಿಗಳೂ ಸಹಾ ಖರ್ಚು ಆಗಿರುತ್ತದೆ. ಆದುದರಿಂದ ಈ ಬಗ್ಗೆ ಅಂತಿಮ ನಿರ್ಧಾರವನ್ನು ತೆಗೆದುಕೊಂಡು ಸರ್ಕಾರ ತ್ವರಿತವಾಗಿ ಕೆಲಸವನ್ನು ಪೂರ್ಣಗೊಳಿಸುವುದಕ್ಕೆ ಪ್ರಯತ್ನ ನಡೆಸುತ್ತದೆ.